# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯವರ ಘನ ಅಧ್ಯಕ್ಷತೆಯಲ್ಲಿ ದಿ:02.07.2022 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಭೆಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ.ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ.ಹೇಮಂತ್ ಕುಮಾರ್ ಸ.ಅ 134. | ಕಾರ್ಯದರ್ಶಿ. |
| 3. | ಶ್ರೀ.ಹರ್ಷಿತ್ | AE |
| 4. | ಶ್ರೀ.ಅಣ್ಣಪ್ಪ | TI |
| 5. | ಶ್ರೀ.ಅಂಜನೇಯ | ಸಾರ್ವಜನಿಕರು |
| 6. | ಶ್ರೀ.ಪುಟ್ಟರಾಜು | ಸಾರ್ವಜನಿಕರು |
| 7. | ಶ್ರೀ.ಯಶವಂತ್ ರಾವ್ | ಸಾರ್ವಜನಿಕರು |
| 8. | ಶ್ರೀ.ಅಜಿತ್ | Marshal |
| 9. | ಶ್ರೀ.ಸಿದ್ದರಾಜು | ಸಾರ್ವಜನಿಕರು |
| 10. | ಶ್ರೀ.ಚಂದ್ರ ಶೇಖರ್ | ಸಾರ್ವಜನಿಕರು |
| 11. | ಶ್ರೀ.ಎಲ್.ಚಂದ್ರ ಶೇಖರ್ | TI |
| 12. | ಶ್ರೀ.ಶಿವಕುಮಾರ್ | RI |
| 13. | ಶ್ರೀ.ಅಶ್ವಕ್ | ಸಾರ್ವಜನಿಕರು |
| 14. | ಶ್ರೀ.ವಹೀದ್ | ಸಾರ್ವಜನಿಕರು |
| 15. | ಶ್ರೀ.ಸಯದ್ ವಾಜಿದ್ | ಸಾರ್ವಜನಿಕರು |

ವಾರ್ಡಿನ ಕೆಲಸ ಪರಿವೀಕ್ಷಕರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

1. ಬಾಪೂಜಿನಗರ, ಅನಂತ ನಗರದ 7ನೇ ಕ್ರಾಸ್‌ನಲ್ಲಿ Manhol ನ Pipe ಗಳು ಪದೆ ಪದೆ ಕಟ್ಟಿಕೊಂಡು ಬಹಳ ತೊಂದರೆಯಾಗುತ್ತಿದ್ದು Pipelineನ್ನು ಬದಲಾಯಿಸಿಕೊಡಬೇಕೆಂದು ಶ್ರೀ.ಸಿದ್ದರಾಜು ರವರು ವಿನಂತಿಸಿ, BWSSB ಯ ಸ.ಅ ಶ್ರೀ.ದಿನೇಶ್ ರವರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ.
2. ಶಾಮಣ್ಣ ಗಾರ್ಡನ್‌ನಲ್ಲಿ Manhole ಗಳು ಒಡೆದಿದ್ದು ಕುಡಿಯುವ ನೀರಿನೊಂದಿಗೆ ಬೆರೆತು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಾಗಿ ಸಾರ್ವಜನಿಕರು ಕೋರಿ BWSSB ಯ ಸ.ಅ ಶ್ರೀ.ದಿನೇಶ್ ರವರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ.
3. ಬಾಪೂಜಿನಗರದ 5ನೇ ಕ್ರಾಸ್‌ನಲ್ಲಿ ಒಂದು ಮರ ಒಣಗಿದ್ದು, ಅರಣ್ಯ ವಿಭಾಗಕ್ಕೆ ದೂರವಾಣಿ ಮೂಲಕ ತಿಳಿಸಿ ಅದನ್ನು ತೆರವುಗೊಳಿಸಿಕೊಟ್ಟಿರುತ್ತಾರೆ.
4. ಹೊಸಗುಡ್ಡದಹಳ್ಳಿ ಎಚ್ ರಸ್ತೆಯಲ್ಲಿ ಎರಡು Manhole ಗಳು ಒಡೆದಿದ್ದು ಅದನ್ನು Pipeline ನ್ನು ಬದಲಾಯಿಸಿ ಸರಿಪಡಿಸಲಾಗಿರುತ್ತದೆ. ರಸ್ತೆಯ ಕಟ್ಟಿಂಗ್‌ಗಳನ್ನು ಮಣ್ಣು ಮಟ್ಟ ಮಾಡಿ ಡಾಂಬರನ್ನು ಹಾಕಿ ಸರಿಪಡಿಸಬೇಕಾಗಿರುತ್ತದೆ.
5. ಶ್ರೀ.ಮೊಹಮದ್ ರವರು ಶಾಮಣ್ಣ ಗಾರ್ಡನ್ ಟಿಪ್ಪು ಮಸೀದಿ ಬಳಿ Manhole ನ Cover ಹೊಡೆದಿದ್ದು ಅದನ್ನು ಬದಲಾಯಿಸಿಕೊಡಬೇಕೆಂದು ಸಭೆಗೆ ಕೋರಿ BWSSB ಯ ಸ.ಅ ಶ್ರೀ.ದಿನೇಶ್ ರವರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ.
6. ಈ ಪಾಕ್ಷಿಕದಲ್ಲಿ ರೂ: 6.75 ಲಕ್ಷಗಳು ತೆರಿಗೆ ಮೂಲಕ ಸಂಗ್ರಹಿಸಲಾಗಿದೆ ಎಂದು ಕಂದಾಯ ಪರಿವೀಕ್ಷಕರು ಸಭೆಗೆ ತಿಳಿಸಿದರು.

7. ಸಾರ್ವಜನಿಕರಿಂದ ಶಾಮಣ್ಣ ಗಾರ್ಡ್‌ನ್ ವೆಂಕಟೇಶ್ವರ ಶಾಲೆಯ ಬಳಿ ಬಾಪೂಜಿನಗರ 3ನೇ ಮುಖ್ಯರಸ್ತೆ ಸಾರ್ವಜನಿಕರ ಗ್ರಂಥಾಲಯದ ಬಳಿ ರಸ್ತೆಗಳಲ್ಲಿ, ವಿಧ್ಯುತ್ ದೀಪಗಳು ಬರುತ್ತಿಲ್ಲವೆಂದು ದೂರವಾಣಿ ಮೂಲಕ ಕೆಲಸ ಪರಿವೀಕ್ಷರಿಗೆ ತಿಳಿಸಿದರು Street Light Repair Agency ಗೆ ದೂರವಾಣಿ ಮುಖೇನ ತಿಳಿಸಿ ಸಮಸ್ಯೆ ಬಗೆಹರಿಸಲಾಗಿದೆ.

8. ಘನತ್ಯಾಜ್ಯ ನಿರ್ವಹಣೇ ಸಮರ್ಪಕವಾಗಿ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಪ್ರತಿದಿನ ವಾರ್ಡ್‌ನಲ್ಲಿ ಕಸವಿಂಗಡನೆ-ಸಾಗಣೆ ಸಮರ್ಪಕವಾಗಿ ನಡೆಯುತ್ತಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು

- ಈ ಸಭೆಯಲ್ಲಿ ಚರ್ಚಿಸಿರುವ ಸಮಸ್ಯೆಗಳನ್ನು ಬಗೆಹರಿಸಿ ಪಾಲನಾ-ವರದಿ ಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ಯವರು ತಿಳಿಸಿದರು.
- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ.ಎಸ್.ಕೆ.ಹೇಮಂತ್ ಕುಮಾರ್ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು

**ಸದಸ್ಯ ಕಾರ್ಯದರ್ಶಿ-ವಾರ್ಡ್ 134 ಹಾಗೂ**
**ಸಹಾಯಕ ಅಭಿಯಂತರರು,**

(ನಿಶಾಂತ್)
**ನೋಡಲ್ ಅಧಿಕಾರಿ ವಾರ್ಡ್-134**